ವಿಷಯ :– ಹಿಂದುಳಿದ ಗಡಿ ಪಟ್ಟಣ ಪ್ರದೇಶಗಳಲ್ಲಿ ವಸತಿ ಸೌಕರ್ಯ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 587 (900)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕರ್ನಾಟಕ ಹಿಂದುಳಿದ ಗಡಿ ಪಟ್ಟಣ ಪ್ರದೇಶಗಳಲ್ಲಿ ವಸತಿ ಸೌಕರ್ಯ ನೀಡಲು ವಿಶೇಷವಾದ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆಯೇ ?

2) ಅಂತಹ ವಿಶೇಷ ಯೋಜನೆಯಲ್ಲಿ ಮೈಸೂರು ಜಿಲ್ಲೆ ಚಾಮರಾಜನಗರಕ್ಕೆ 3000 ಮನೆಗಳನ್ನು ಟ್ಟಿಸಿಕೊಡಲಾಗುವುದೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) ಕರ್ನಾಟಕ ಗೃಹ ಮಂಡಳಿಯು ಹಿಂದುಳಿದ ಗಡಿ ಪ್ರದೇಶಗಳಲ್ಲಿ ಈಗಾಗಲೇ ಸಾಕಷ್ಟು ಮನೆಗಳನ್ನು ಸಾಮಾನ್ಯ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಿರುತ್ತದೆ.

2) ಚಾಮರಾಜನಗರದಲ್ಲಿ ಈಗಾಗಲೇ ಬೀಡಿ ಕಾರ್ಮಿಕರಿಗಾಗಿ ಒಟ್ಟು 425 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಇದಲ್ಲದೆ ಮಂಡಳಿಯು ತನ್ನ ಸಂಯುಕ್ತ ಯೋಜನೆಯಲ್ಲಿ ಹುಬ್ಳೋ ನೆರವಿನೊಂದಿಗೆ ಒಟ್ಟು 264 ಮನೆಗಳನ್ನು ನಿರ್ಮಿಸಿರುತ್ತದೆ. ಈ ರೀತಿ ಕಟ್ಟಿದ ಮನೆಗಳಲ್ಲಿ ಸಾಕಷ್ಟು ಬೇಡಿಕೆ ಇಲ್ಲದೆ ಆರ್ಥಿಕವಾಗಿ ಹಿಂದುಳಿದ ವರ್ಗದ ಮನೆಗಳಲ್ಲಿ ಒಟ್ಟು 34 ಮನೆಗಳು ಖಾಲಿ ಬಿದ್ದಿರುತ್ತವೆ.

ಚಾಮರಾಜನಗರದಲ್ಲಿ ದಿನಾಂಕ 25–1–90 ರಲ್ಲಿ ಬೇಡಿಕೆ ಸಮೀಕ್ಷೆ ನಡೆಸಿದ್ದು ಒಟ್ಟು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ 19 ಅರ್ಜಿಗಳು ಮಾತ್ರ ಬಂದಿರುತ್ತವೆ. ಇನ್ನು ಉಳಿದ ಶ್ರೇಣಿಗೆ ಬೇಡಿಕೆಯೇ ಇರುವುದಿಲ್ಲ. ಸಾಕಷ್ಟು ಬೇಡಿಕೆ ಬಂದಲ್ಲಿ ವಸತಿ ಯೋಜನೆಯನ್ನು ತೆಗೆದುಕೊಳ್ಳಲಾಗುವುದು.

ವಿಷಯ :– ಕುಟುಂಬ ಯೋಜನೆ ಕುರಿತು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 589 (902)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಲು ಕೈಗೊಂಡಿರುವ ಕ್ರಮಗಳೇನು?

ಆ) ಮುಖ್ಯಮಂತ್ರಿಗಳು ಸೇರಿದಂತೆ ಈಗ ಇರುವ ಮಂತ್ರಿ ಮಂಡಲದ ಎಲ್ಲಾ ಸದಸ್ಯರು ಕುಟುಂಬ ಯೋಜನೆಯನ್ನು ತತ್ವಶಃ ಪಾಲಿಸುತ್ತಿದ್ದಾರೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :–

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯಶಸ್ವಿಯಾಗಲು ಕೈಗೊಂಡಿರುವ ಕ್ರಮಗಳೆಂದರೆ:

1) ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ. 50 ಪ್ರೋತ್ಸಾಹ ಧನವನ್ನು ಮತ್ತು ಮಹಿಳಾ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಗಾಗುವವರಿಗೆ ಹೆಚ್ಚುವರಿ ರೂ. 10 ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

2) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಮನವೊಲಿಸುವ ಇಲಾಖೆಯ ಮತ್ತು ಇಲಾಖೇತರ ಸಿಬ್ಬಂದಿಯವರಿಗೆ ಮತ್ತು ಸಾರ್ವಜನಿಕರಿಗೆ ಒಂದು ವರ್ಷದಲ್ಲಿ ಒಟ್ಟು ಕೇಸುಗಳಿಗೆ ಅನುಸಾರವಾಗಿ ಪ್ರತಿ ಕೇಸಿಗೆ ರೂ. 15 ರಿಂದ ರೂ. 60 ರ ವರೆಗೆ ಪ್ರೇರೇಪಣೆ ಧನವನ್ನು ನೀಡಲಾಗುವುದು.

3) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ಆದ್ಯಷ್ಟ ಚೀಟಿ ನೀಡುವ ಸಲುವಾಗಿ ಪ್ರತಿ ಜಿಲ್ಲೆಗೆ ಪ್ರತಿ ತಿಂಗಳಿಗೆ ರೂ. 15,000 ಮೊಬಲಗನ್ನು ನೀಡಲಾಗುತ್ತಿದೆ.

4) ಎರಡು ಮಕ್ಕಳು ಅಥವಾ ಕಡಿಮೆ ಮಕ್ಕಳಿದ್ದು ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಒಳಪಡುವ ಸರ್ಕಾರಿ ನೌಕರರಿಗೆ ಒಂದು ವಿಶೇಷ ವೇತನ ಭತ್ಯೆ ನೀಡಲಾಗುತ್ತಿದೆ.

5) ಪ್ರತಿ ಉಪ ಕೇಂದ್ರಗಳಿಗೆ ಎರಡು ಸಾವಿರ ರೂ. ಮೌಲ್ಯದ ಔಷಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

6) ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಿಗೆ ನಿರಂತರವಾಗಿ ಶಸ್ತ್ರಚಿಕಿತ್ಸೆಯ ಸೇವೆ ಒದಗಿಸುವ ಸಲುವಾಗಿ ಡೀಜಲ್ ಜನರೇಟರ್‌ಗಳನ್ನು ಒದಗಿಸಲಾಗಿದೆ.

7) ವಿವಿಧ ಹಂತದಲ್ಲಿ ಕುಟುಂಬ ಕಲ್ಯಾಣ ಪ್ರಗತಿಯನ್ನು ನಿಯತಕಾಲಿಕವಾಗಿ ವಿಮರ್ಷಿಸುವ ಸಲುವಾಗಿ ಕುಟುಂಬ ಕಲ್ಯಾಣ ಕ್ರಿಯಾ ಸಮಿತಿಗಳನ್ನು ಪುನರ್ ರಚಿಸಲಾಗಿದೆ.

8) ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನದಲ್ಲಿ ಕ್ರಿಯಾತ್ಮಕ ಪಾತ್ರ ವಹಿಸಲು ಸ್ಥಾನಿಕ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆಗಳು ಒಳಗೊಳ್ಳುವಂತೆ ಮಾಡಲಾಗಿದೆ.

ಆ) ಎರಡು ಮಕ್ಕಳಿರುವವರು ಈ ಪದ್ಧತಿಗಳನ್ನು ಅನುಸರಿಸುತ್ತಿಲ್ಲ. ಬಾಕಿಯವರೆಲ್ಲ ಈ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ.

ವಿಷಯ :- ಪುರಸಭೆ / ನಗರಸಭೆಗಳಿಗೆ ವಿಶೇಷ ಅನುದಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 590 (899)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅನೇಕ ಪುರಸಭೆ/ನಗರ ಸಭೆಗಳಿಗೆ ಆದಾಯವಿಲ್ಲದ ನಾಗರಿಕರ ಕೆಲಸ ಕಾರ್ಯಗಳಿಗೆ ಅಡಚಣೆ ಆಗಿರುವುದರಿಂದ ಪ್ರತಿವರ್ಷ ವಿಶೇಷ ಅನುದಾನ ಕೊಡುವ ಆಲೋಚನೆ ಸರ್ಕಾರಕ್ಕೆ ಇರುವುದೇ ?

ಆ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕ್ರಮಕ್ಕೆಗೊಳ್ಳುವರೆ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :-

ಅ) ಇದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಹರಪನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಶತಮಾನೋತ್ಸವ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 591 (788)

ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ) :- ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನೂರು ವರ್ಷ ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ವಿದ್ಯಾ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಇ) ಸದರಿ ವಿದ್ಯಾರ್ಥಿನಿಯರಿಗೆ ಕುಳಿತುಕೊಳ್ಳಲು ಬೆಂಚು ಹಾಗೂ ಆಸನಗಳಿರದೇ ಇರುವುದು ಸರ್ಕಾರವವರ ಗಮನಕ್ಕೆ ಬಂದಿದೆಯೇ ?

ಈ) ವಿದ್ಯಾ ಸಂಸ್ಥೆಯ ಕಟ್ಟಡ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸದರಿ ಕಟ್ಟಡದ ದುರಸ್ತಿಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಉ) ಈ ಸಂಸ್ಥೆಗೆ ನೂರು ವರ್ಷಗಳ ಕಾಲ ಗತಿಸಿರುವುದರಿಂದ ಶತಮಾನೋತ್ಸವ ಆಚರಣೆ ಸರ್ಕಾರದವರ ಉದ್ದೇಶವೇನಾದರೂ ಇದೆಯೇ ? ಹಾಗಿದ್ದಲ್ಲಿ ಯಾವಾಗ ಹಾಗೂ ಎಷ್ಟು ಹಣ ಬಿಡುಗಡೆ ಮಾಡಲಾಗುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :-

ಅ) ಬಂದಿದೆ.

ಆ) 1132.

ಇ) ಬಂದಿದೆ.

ಈ) ಬಂದಿದೆ.